# ಸಾಧನೆಯ ಶಿಖರದಲ್ಲಿ..



ರುದ್ರಪಟ್ಟಂ ಸಹೋದರರು

**ಆರು ದಶಕಗಳಿಂದ ಸಂಗೀತ ಕಚೇರಿ ನೀಡುತ್ತಿರುವ ರುದ್ರಪಟ್ಟಂ ಸಹೋದರರ ಸಾಧನೆಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪುರಸ್ಕಾರ ಲಭಿಸಿದೆ.**

**ಬೃಂದಾ ಎನ್.ರಾವ್**

**ಕ**ರ್ನಾಟಕ ಸಂಗೀತ ಕ್ಷೇತ್ರದಲ್ಲಿ ವಿದ್ವಾನ್ ಆರ್.ಎನ್.ತ್ಯಾಗರಾಜನ್ ಹಾಗೂ ವಿದ್ವಾನ್ ಆರ್.ಎನ್. ತಾರಾನಾಥನ್ ರುದ್ರಪಟ್ಟಂ ಸಹೋದರರೆಂದೇ ಹೆಸರಾದವರು.

ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ರುದ್ರಪಟ್ಟಂ ಸಂಗೀತ, ವೇದಾಧ್ಯಯನಗಳಿಗೆ ಹೆಸರಾದ ಸಣ್ಣ ಗ್ರಾಮ. ಇಲ್ಲಿಯ ಸಂಗೀತ ವಿದ್ವಾಂಸ, ಗಮಕಿ ಮತ್ತು ವಾಗ್ಮಿಯೂ ಆಗಿದ್ದ ಕೃಷ್ಣಶಾಸ್ತ್ರಿಗಳ ಪುತ್ರ ವಿದ್ವಾನ್ ಆರ್.ಕೆ.ನಾರಾಯಣ ಸ್ವಾಮಿಯವರೇ ಈ ಸಹೋದರರ ತಂದೆ ಹಾಗೂ ಗುರುಗಳು. ಪಿಟೀಲು ವಾದಕರಾಗಿದ್ದ ವಿದ್ವಾನ್ ಆರ್.ಕೆ.ವೆಂಕಟರಾಮ ಶಾಸ್ತ್ರಿ ಇವರ ದೊಡ್ಡಪ್ಪ ಹಾಗೂ ವಿದ್ವಾನ್ ಆರ್.ಕೆ. ರಾಮನಾಥನ್ ಮತ್ತು ವಿದ್ವಾನ್ ಡಾ.ಆರ್.ಕೆ.ಶ್ರೀಕಂಠನ್ ಇವರ ಚಿಕ್ಕಪ್ಪಂದಿರು.

ಮೈಸೂರಿನಲ್ಲಿ ನೆಲೆಸಿರುವ ನಾರಾಯಣ ಸ್ವಾಮಿಯವರು ಉನ್ನತ ಶಿಕ್ಷಣವನ್ನು ಮದ್ರಾಸಿನ ವಿದ್ವಾಂಸ ಮುಸಿರಿ ಸುಬ್ರಹ್ಮಣ್ಯ ಅಯ್ಯರ್ ಅವರಿಂದ ಪಡೆದರು. ರುದ್ರಪಟ್ಟಂ ಮುಸಿರಿ ಶೈಲಿಗಳ ಸುಮಧುರ ಸಂಗೀತವನ್ನು ಮಕ್ಕಳಿಗೆ ಧಾರೆ ಎರೆದರು. ಸಂಗೀತ ತರಬೇತಿ ಗುರುಕುಲ ಪದ್ಧತಿಯಲ್ಲೇ ನಡೆಯಿತು.

ಸೆಮ್ಮಂಗುಡಿ, ಜಿಎನ್‌ಬಿ, ರಾಮನಾಡ್ ಕೃಷ್ಣನ್, ಆಲತ್ತೂರು ಸಹೋದರರು ಮತ್ತಿತರ ಸಂಗೀತ ದಿಗ್ಗಜರ ಪ್ರಭಾವ ಈ ಸಹೋದರರ ಮೇಲಿತ್ತಾದರೂ ಕ್ರಮೇಣ ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ಇವರು ಬೆಳೆಸಿಕೊಂಡರು.

## ಸಂಗೀತ ಯಾತ್ರೆ

ಹದಿ ವಯಸ್ಸಿನಲ್ಲೇ ಆಕಾಶವಾಣಿ ನಡೆಸುವ ವಾರ್ಷಿಕ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗೆದ್ದು, ಆಗಿನ ರಾಷ್ಟ್ರಪತಿ ಡಾ.ಎಸ್.ರಾಧಾಕೃಷ್ಣನ್ ಅವರಿಂದ ಪ್ರಶಸ್ತಿ ಸ್ವೀಕರಿಸಿದ ಹೆಗ್ಗಳಿಕೆ ಇವರದು. 'ಲವ ಕುಶರಂತೆ ಹಾಡುತ್ತಾರೆ' ಎಂದು ಪಿಟೀಲು ವಿದ್ವಾಂಸರಾಗಿದ್ದ